# ಒಂದು ವರ್ಷ ಕ್ಯಾಮೆರಾ ಕಣ್ಣಿನಿಂದ ಮರೆಯಾದೆ

■ ರಾಘವೇಂದ್ರ ಕೆ.

## ಮಹೇಶ್ ವಶಿಷ್ಠ

ಉದಯದ ‘ಸಿಂಧು ಭೈರವಿ’ಯ ಅಥರ್ವ



◆ **ಬಾಲ್ಯದಲ್ಲಿ ಏನಾಗಬೇಕು ಅಂದ್ಕೊಂಡಿದ್ರಿ?**

ಉತ್ತರ ಕನ್ನಡದ ಯಲ್ಲಾಪುರ ತಾಲ್ಲೂಕಿನ ಪುಟ್ಟ ಹಳ್ಳಿಯವನು. ಸಂಸ್ಕೃತ ಮತ್ತು ವೇದಾಧ್ಯಯನವನ್ನು ಮಾಡಿದ್ದೇನೆ. ಸಿನಿಮಾ ರಂಗಕ್ಕೆ ಪ್ರವೇಶ ಮಾಡಬೇಕು ಎನ್ನುವ ಆಸೆ ಹತ್ತು ವರ್ಷಗಳ ಹಿಂದೆ ಮೂಡಿತು. ಅದಕ್ಕೆ ನಮ್ಮ ಪೋಷಕರ ಬೆಂಬಲ ಇರಲಿಲ್ಲ. ಅಪ್ಪ ತಾಳಮದ್ದಳೆ ಕಲಾವಿದರು. ಯಕ್ಷಗಾನದಲ್ಲಿ ಅಪ್ಪ ಕ್ರಿಯಾಶೀಲರಾಗಿದ್ದರು. ಅದರ ಪ್ರಭಾವವೋ ಏನೋ ಕಲಾಸಕ್ತಿ ಅರಿವಿಲ್ಲದಂತೆ ನನ್ನಲ್ಲಿ ಮೂಡಿತ್ತು. ಕೊನೆಗೆ ಪೋಷಕರ ಮನವೊಲಿಸುವಲ್ಲಿ ಯಶಸ್ವಿಯಾದೆ. ಅವರೂ ಬೆಂಬಲವನ್ನು ನೀಡಿದ್ದರಿಂದ ಬೆಂಗಳೂರಿಗೆ ಬಂದು ಅಭಿನಯ ತರಗತಿಗೆ ಸೇರಿಕೊಂಡೆ. ತೆರೆಯಲ್ಲಿ ಕಾಣದಿದ್ದರೂ ನನ್ನ ಆಸೆಯಂತೆ ಕಲಿಕೆಗೆ ಅವಕಾಶ ಸಿಕ್ಕಿದ್ದೇ ಮೊದಲ ಯಶಸ್ಸು ಎಂದು ಭಾವಿಸಿದೆ.

◆ **ನಟನೆಯ ಆರಂಭದ ದಿನಗಳು ಹೇಗಿದ್ದವು?**

ಬೆಂಗಳೂರಿಗೆ ಬಂದ ನಂತರ ಆಡಿಷನ್ ಕೊಡುವುದೇ ದೊಡ್ಡ ಕೆಲಸ ಆಯಿತು. ಸಿನಿಮಾ–ಧಾರಾವಾಹಿ ಎನ್ನುವ ಲೆಕ್ಕಾಚಾರ ಇಲ್ಲದೆ, ಎಲ್ಲಾ ಕಡೆ ಆಡಿಷನ್ ನೀಡಿದ್ದೂ ಇದೆ. ಆದರೆ ಏನೂ ಪ್ರಯೋಜನ ಆಗುತ್ತಿರಲಿಲ್ಲ. ಆಗೆಲ್ಲ, ಏನಾದರೂ ಮಾಡಲೇಬೇಕು ಎನ್ನುವ ಇಂಗಿತ ಕಾಡುತ್ತಿತ್ತು. ನನ್ನ ನಿರೀಕ್ಷೆಯ ಪಾತ್ರಗಳು ಸಿಕ್ಕಲಿಲ್ಲ. ಹಾಗೆಂದು ಹತಾಶನಾಗದೆ ಮೂರು ವರ್ಷ ಜೂನಿಯರ್ ಆರ್ಟಿಸ್ಟ್ ಆಗಿ ಕೆಲಸವನ್ನು ಆರಂಭಿಸಿದೆ. ನನ್ನ ನಿರ್ಧಾರಕ್ಕೆ ಕುಟುಂಬದ ಬೆಂಬಲವೂ ಸಿಕ್ಕಿದ್ದರಿಂದ ಅದೆಲ್ಲ ಕಷ್ಟ ಆಗಲಿಲ್ಲ. ಅರೆಕಾಲಿಕ ಕೆಲಸ ಆದರೂ ಅದನ್ನು ಖುಷಿಯಿಂದ ಮಾಡುತ್ತಿದ್ದೆ.

◆ **ಮೊದಲ ದಿನ ಬಣ್ಣ ಹಚ್ಚಿದ ಅನುಭವ ಹೇಗಿತ್ತು?**

‘ಶಾಂತಂ ಪಾಪಂ’ ಕಾರ್ಯಕ್ರಮದಲ್ಲಿ ಮೊದಲ ಅವಕಾಶ ಸಿಕ್ಕಿತು. ಚಿತ್ರೀಕರಣಕ್ಕೆ ಮನೆಯಲ್ಲಿ ತಿಳಿಸದೆ ಬಂದಿದ್ದೆ. ಅದಕ್ಕೂ ಮೊದಲು ಒಮ್ಮೆ ಆಹ್ವಾನಿಸಿದ್ದರೂ ಬರಲು ಆಗಿರಲಿಲ್ಲ. ಚಿತ್ರೀಕರಣ ಮುಗಿದ ನಂತರ ಮನೆಗೆ ಫೋನ್ ಮಾಡಿ ‘ನಾನು ಟೀವಿಯಲ್ಲಿ ಬರ್ತೀನಿ’ ಅಂತ ಹೇಳಿದ್ದೆ. ಅದೆಲ್ಲ ಇನ್ನೂ ನೆನಪಿದೆ. ನನ್ನ ಅಭಿನಯದ ಮೊದಲ ಕಂತು ನವೆಂಬರ್ ತಿಂಗಳ 1ನೇ ತಾರೀಖಿನಂದು ಪ್ರಸಾರ ಆಗಿತ್ತು. ಅದನ್ನು ನೋಡಲು ಪರಿಚಿತರೆಲ್ಲರಿಗೂ ತಿಳಿಸಿದ್ದೆ. ಅದನ್ನು ನೋಡಿ ಮನೆಯಲ್ಲಿ ಎಲ್ಲರೂ ಖುಷಿಪಟ್ಟರು. ಅದನ್ನು ವಿನೋದ್ ದೋಂಡಾಳೆ ನಿರ್ದೇಶನ ಮಾಡಿದ್ದರು. ಸಿಕ್ಕಿದ್ದು ಪುಟ್ಟ ಪಾತ್ರವಾದರೂ ಅಗಾಧ ಆತ್ಮವಿಶ್ವಾಸವನ್ನು ತುಂಬಿತು. ಪೋಷಕರೂ ನಟನೆಯಲ್ಲಿ ಏನಾದರು ಮಾಡುತ್ತೀಯಾ ಎಂದು ಮತ್ತಷ್ಟು ಪ್ರೋತ್ಸಾಹವನ್ನು ನೀಡಿದರು.

◆ **ಅಥರ್ವ ಪಾತ್ರದ ಬಗ್ಗೆ ಏನೆನಿಸುತ್ತದೆ?**

‘ಸಿಂಧು ಭೈರವಿ’ಯಲ್ಲಿ ನಾಯಕನ ಅಣ್ಣನಾಗುವ ಅವಕಾಶ ಬಂದ ತಕ್ಷಣ ಮಾಡೋಣ ಎಂದುಕೊಂಡೆ. ಪಾತ್ರದಲ್ಲಿ ಅಪ್ಪನಾಗುವ ಸನ್ನಿವೇಶ ಬರುತ್ತದೆ. ಒಂದೇ ರೀತಿಯ ಪಾತ್ರ ಮಾಡುವುದು ಕಷ್ಟ. ಇದಕ್ಕೆ ಎಲ್ಲೆ ಎನ್ನುವುದು ಇಲ್ಲ. ತಮಾಷೆಯಿಂದ ಎಲ್ಲರಿಗೂ ಇಷ್ಟ ಆಗುವ ವ್ಯಕ್ತಿ. ತನ್ನ ಹುಡುಗಿಗೆ ಅಪಾರ ಪ್ರೀತಿ ತೋರಿಸುತ್ತಾನೆ. ಅಭಿನಯಿಸಲು ತುಂಬ ಚೆನ್ನಾಗಿದೆ. ಮುಂದೆ ಲೀಡ್‌ಗಿಂತ ನೆಗೆಟಿವ್ ಮಾಡಬೇಕು ಎನ್ನುವ ಆಸೆ ಇದೆ. ಧಾರಾವಾಹಿಗಳಲ್ಲಿ ಪುರುಷ ಪಾತ್ರಗಳಿಗೆ ನೆಗೆಟಿವ್ ಅವಕಾಶ ಕಡಿಮೆ. ಒಂದು ವೇಳೆ ಅಂತಹ ಪಾತ್ರ ಸಿಕ್ಕರೆ ಮಾಡಬೇಕು. ವೀಕ್ಷಕರನ್ನು ತಲುಪಬೇಕು. ಅವರು ನನ್ನ ಬಗ್ಗೆ ಮಾತನಾಡಬೇಕು. ಹಾಗೆ ಅಭಿನಯಿಸಬೇಕು ಎನ್ನುವ ಆಸೆ ಇದೆ. ಪಾತ್ರವನ್ನು ಹೀಗೇ ನಿರ್ವಹಿಸಬೇಕು ಎನ್ನುವ ಬೌಂಡರಿ ಇರಬಾರದು ಎಂದು ಬಯಸುತ್ತೇನೆ. ನನ್ನ ನಟನಾ ಕೌಶಲವನ್ನು ಆ ಮೂಲಕ ಹೊರಹೊಮ್ಮಿಸಬೇಕು.

◆ **ಅನಿಶ್ಚಿತ ಬದುಕಿನ್ನೇ ಅರಸಿ ಬಂದಿದ್ದು ಏಕೆ?**

ಇದು ಪ್ಯಾಶನ್. ನನ್ನ ಮದುವೆಗೆ ನಾಲ್ಕು ತಿಂಗಳು ಇತ್ತು, ಆಗ ‘ನೇತ್ರಾವತಿ’ ಮುಗಿಯಿತು. ಅದಾಗಿ ಒಂದು ವರ್ಷ ಕ್ಯಾಮೆರಾ ಕಣ್ಣಿನಿಂದ ಮರೆಯಾದೆ. ಪತ್ನಿ ಬೆಂಬಲಕ್ಕೆ ನಿಂತು ಪ್ರೋತ್ಸಾಹಿಸಿದರು. ಮತ್ತೆ ಅವಕಾಶ ಸಿಕ್ಕಾಗ ಅಭಿನಯಿಸಲು ಹುರಿದುಂಬಿಸಿದರು. ಸಾಮಾನ್ಯವಾಗಿ ನಟನೆಯನ್ನೇ ನಂಬಿ ಬದುಕುತ್ತೇವೆ ಎಂದರೆ ಸ್ವಲ್ಪ ಕಷ್ಟ ಆಗಬಹುದು. ಇದರ ಜೊತೆ ಬೇರೆ ಇನ್ನೇನಾದರೂ ಕೆಲಸ ಮಾಡುವಂತಿದ್ದರೆ ಅನುಕೂಲ. ಇಲ್ಲವೆ ಯಾವುದಾದರೂ ರೂಪದಲ್ಲಿ ಆದಾಯ ಬರುವಂತೆ ಇರಬೇಕು. ಇದನ್ನೇ ವೃತ್ತಿಪರವಾಗಿ ತೆಗೆದುಕೊಂಡರೆ, ಕೌಟುಂಬಿಕ ಹಿನ್ನೆಲೆಯಾದರೂ ಚೆನ್ನಾಗಿರಬೇಕು. ಇಲ್ಲದಿದ್ದರೆ ಕಷ್ಟ ಆಗುತ್ತದೆ.

◆ **ನಟನೆಗೆ ಟಿಪ್ಸ್ ಕೇಳಿದರೆ, ಏನು ಹೇಳುತ್ತೀರಿ?**

ಚಾನ್ಸ್ ಕೊಡಿಸಿ ಎಂದು ಸಾಕಷ್ಟು ಕೋರಿಕೆಗಳೂ ಬಂದಿವೆ. ಅವರಿಗೆ, ಮೊದಲು ಶಿಕ್ಷಣವನ್ನು ಪೂರ್ಣ ಮಾಡಬೇಕು. ಇದಿಲ್ಲದಿದ್ದರೆ ಏನಾದರೂ ಕೆಲಸ ಮಾಡುತ್ತೇನೆ ಎನ್ನುವಂತೆ ಇರಬೇಕು. ಓದನ್ನು ಅರ್ಧಕ್ಕೆ ನಿಲ್ಲಿಸಿ ಬರುವುದು ಕ್ಷೇಮವಲ್ಲ. ತನ್ನ ಕಾಲ ಮೇಲೆ ನಿಲ್ಲುತ್ತೇನೆ ಎನ್ನುವ ವಿಶ್ವಾಸ ಅವರಿಗೆ ಇರಬೇಕು. ಸಿನಿಮಾ ರಂಗದಲ್ಲಿ ಯಾರಿಗೆ ಒಳ್ಳೆಯ ಛಾನ್ಸ್ ಸಿಗುತ್ತೆ ಎಂದು ಹೇಳಲು ಆಗುವುದಿಲ್ಲ. ಸಾಮಾನ್ಯ ಒಬ್ಬ ನಟನಿಗೆ ಸಿಕ್ಕಂತಹ ಅವಕಾಶ, ಅಪ್ರತಿಮ ಕಲಾವಿದನಿಗೆ ಸಿಗದೇ ಇರಬಹುದು. ನಮ್ಮ ಕಡೆಯಿಂದ ಬರುವ ಹುಡುಗರಿಗೂ ಇದನ್ನೇ ಹೇಳುತ್ತೇನೆ. ■